**CW : 13**
PW : 6

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪುತ್ತೂರು, ದ.ಕ.

# CC No.497/2025

ಸಾಕ್ಷಿದಾರರ ಹೆಸರು : ಶ್ರೀ ಎಸ ಜಿ ಜಗದೀಶ

ತಂದೆಯ ಹೆಸರು : ಟಿ ಗೋವಿಂದಪ್ಪ

ಪ್ರಾಯ : 58 ವರ್ಷ

ಉದ್ಯೋಗ ಮಳಿಗೆ ವ್ಯವಸ್ಥಾಪಕರು ಕೆಎಸಬಿಸಿಎಲ್, ಪುತ್ತೂರು

ವಾಸಸ್ಥಳ : ಪುತ್ತೂರು

ದಿನಾಂಕ:**21.04.2026** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:</u>

ದಿ. 29.03.2021 ರಿಂದ ಪ್ರಸ್ತುತವೂ ಸಹ ನಾನು ಕೆಎಸಬಿಸಿಎಲ್ ಪುತ್ತೂರಿನಲ್ಲಿ ಮಳಿಗೆ ವ್ಯವಸ್ಥಾಪಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿ.02.2.2025 ರಂದು ಪುತ್ತೂರು ಗ್ರಾಮಾಂತರ ಪೊ. ಠಾಣೆಯ ಪಿ ಎಸ್ ಐ ಅವರು ಅಬಕಾರಿ ಭದ್ರತಾ ಚೀಟಿಗಳ ನಂಬರ ನಮೂದಿಸಿ 180 ಎಂ ಎಲ್ ಅಳತೆಯ 17 ಒರಿಜಿನಲ ಚಾಯ್ಸ್ ಡಿಲಕ್ಸ ವಿಸ್ಕಿಯ ಸ್ಯಾಚೆಟ್ ಗಳು ಯಾವ ಮದ್ಯ ಮಾರಾಟದ ಮಳಿಗೆಯು ಸರಬರಾಜಾಗಿದೆ ಎಂದು ಮಾಹಿತಿ ಕೇಳಿ ಪತ್ರ ವ್ಯವಹರಿಸಿದ್ದರು.

ನಾವು ಅದರ ಬಗ್ಗೆ ಪರಿಶೀಲಿಸಿದಾಗ ದಾಖಲಾತಿಗಳಂತೆ ಎಂ ಎಸ್ ಐ ಎಲ್ ಬೆಟ್ಟಂಪಾಡಿ ಮದ್ಯ ಮಾರಾಟದ ಮಳಿಗೆಗೆ ಮೇಲೆ ತಿಳಿಸಿದ ವಿಸ್ಕಿಯ ಸ್ಯಾಚೆಟಗಳು ಸರಬರಾಜು ಆಗಿವೆ ಎಂದು ಪಿಎಸ್ಐ ಪುತ್ತೂರು ಗ್ರಾಮಾಂತರ ಪೊ. ಠಾಣೆಯವರಿಗೆ ವರದಿ ನೀಡಿದ್ದೇನೆ. ವರದಿಯೊಂದಿಗೆ ದಿ.30.12.2024, 04.01.2025 ಹಾಗೂ 13.04.2025 ರಂದು ಮೇಲೆ ತಿಳಿಸಿದ ವಿಸ್ಕಿಯ ಸ್ಯಾಚೆಟ್ ಗಳು ಎಂ ಎಸ್ ದಿ ಎಲ್ ಬೆಟ್ಟಂಪಾಡಿಗೆ ಸರಬರಾಜು ಸಂಬಂಧಿತ ದಾಖಲಾತಿಗಳನ್ನು ನೀಡಿದ್ದೇನೆ.

ನಾನು ಪೋಲಿಸರಿಗೆ ನೀಡಿದ ವರದಿ ಮತ್ತು ಅದಕ್ಕೆ ಅಡಕಗೊಳಿಸಿದ ದಾಖಲಾತಿಗಳನ್ನು ನೋಡಿದರೆ ಗುರುತಿಸುತೇನೆ.

**CW : 13**
PW : 6

ಸಾಕ್ಷಿಯು ವರದಿಯನ್ನು ಹಾಗೂ ಅದಕ್ಕೆ ಅಡಕಗೊಂಡ 3 ಪರ್ಮಿಟ್ ಲೇಬಲ್ ಗಳ ಪತ್ರದ ಯಥಾನಕಲುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ.10ರಿಂದ 13 ಎಂದು ಗುರುತಿಸಲಾಯಿತು. ನಿಪಿ10 ರಿಂದ 13ರಲ್ಲಿನ ಸಾಕ್ಷಿಯ ಸಹಿಗಳನ್ನು ನಿಪಿ10ಎ,11ಎ,12ಎ,13ಎ ಎಂದು ಗುರುತಿಸಲಾಯಿತು.

ಪಾಟೀ ಸವಾಲುಃಆರೋಪಿತರ ಪರ ವಕೀಲರಿಂದಃ

ನಿಪಿ10 ರಿಂದ 13 ದಾಖಲಾತಿಗಳ ಪ್ರಿಂಟ ಔಟ್ ನ್ನು ತಮ್ಮ ಕಚೇರಿಯಲ್ಲಿ ತೆಗೆದಿರುತ್ತೇವೆ. ಪಿ ಎಸ್ ಐ ಪುತ್ತೂರು ಪೊ. ಠಾಣೆಯವರ ಕೋರಿಕೆಯಂತೆ ದಾಖಲಾತಿಗಳನ್ನು ನೀಡಿದ್ದೇನೆ. ನಾನು ಈ ಸಂಬಂಧಿತವಾಗಿ ಪೋಲಿಸರಿಗೆ ಹೇಳಿಕೆ ಕೊಟ್ಟಿಲ್ಲ. ಪೋಲಿಸರು ತಾವು ವಶಪಡಿಸಿಕೊಂಡ ಸ್ಯಾಚೆಟಗಳನ್ನು ನನಗೆ ತೋರಿಸಿಲ್ಲ ಬದಲಾಗಿ ಅದರ ಭದ್ರುತಾ ಚೀಟಿ ನಂಬರನ್ನು ನಮಗೆ ಮಾಹಿತಿ ಕೊಟ್ಟಿದ್ದಾರೆ. 17 ಸ್ಯಾಚೇಟಗಳನ್ನು ಬೇರೆ ಬೇರೆ ದಿನಾಂಕಗಳಲ್ಲಿ ನಾವು ಮಳಿಗೆಗೆ ಕಳುಹಿಸಿರುತ್ತೇವೆ.

ನಾವು ನೀಡಿದ ಮಾಹಿತಿಯಲ್ಲಿ ಆ ಸ್ಯಾಚೆಟಗಳನ್ನು ಯಾರಿಗೆ ಮಾರಾಟ ಮಾಡಲಾಗಿದೆ ಎಂಬ ಬಗ್ಗೆ ವಿವರಗಳಿಲ್ಲ. ನಮ್ಮ ಹತ್ತಿರ ಮದ್ಯ ಖರೀದಿ ಮಾಡಿದರೆ ಅದಕ್ಕೆ ಸಂಬಂಧಿತ ಬಿಲ್ಲು ಆನಲೈನ ಮೂಲಕ ಪಾವತಿಯಾಗಿರುತ್ತದೆ. ಈ ಕೇಸಿನಲ್ಲಿ ಪೋಲಿಸರಿಗೆ ಸಹಕರಿಸಲು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ10 ರಿಂದ 13 ದಾಖಲಾತಿಗಳನ್ನು ನಾನು ಸೃಷ್ಟಿಸಿ ಪೋಲಿಸರಿಗೆ ನೀಡಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ.ಇದೆ.

1ನೇ ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು,
ಮತ್ತು ಜೆಎಂಎಫ್‌ಸಿ, ಪುತ್ತೂರು, ದ.ಕ.

**CW : 13**
PW : 6